ಮೇಲ್ಪಟ್ಟ ವ ಕೀಳ್ಪಟ್ಟ ದರ್ಜೆ ನೌಕರರು ರೈಲ್‌ಭಂಡಿ ಮೂಲಕ ಪ್ರಯಾಣ ಮಾಡುವಣ.

1884ನೇ ಇಸವಿ ಸೆಪ್ಟಂಬರ್ 22ನೇ ನುಕ್ತಂ 1596ನೇ ಸರ್‌ಕ್ಯುಲರ್.

1884ನೇ ಇಸವಿ ಮಾರ್ಚೀ 26ನೇ ನುಕ್ತಮಿನ 1584ನೇ ಸರ್‌ಕ್ಯುಲರನ್ನು ತಿದ್ದುಪಡಿಮಾಡುವದರಲ್ಲಿ ಕಾಂಪ್ಟ್ರೋಲರ್‌ಯವರು ತಿಳಿಸುವದೇನಂದರೆ,—ಸದರೀ ಸರ್‌ಕ್ಯುಲರ್‌ನಲ್ಲಿ ಹೇಳಿದ ಪ್ರಕಾರವಾಗಿ ರೈಲ್‌ಭಂಡಿ ಮೂಲಕವಾಗಿ ಪ್ರಯಾಣ ಮಾಡುವ ಮೇಲ್ಪಟ್ಟ ದರ್ಜೆಯ ಆಫೀಸರುಗಳು, ಅವರು ಯಾವ ತರಗತಿ ಭಂಡಿಯಲ್ಲಿ ಪ್ರಯಾಣಮಾಡುವದಕ್ಕೆ ಅರ್ಹರೋ ಅಂಥಾ ತರಗತಿಯ ದ್ವಿಗುಣಚಾರ್ಜನ್ನು ಪಡೆಯತಕ್ಕದ್ದು; ಆದರೆ ಕೀಳ್ಪಟ್ಟ ದರಜೆ ನೌಕರರು ಈಗಿನಂತೆಯೇ 3ನೇ ತರಗತಿಯ ಚಾರ್ಜನ್ನೂ ಮತ್ತು ಅವರು ಅರ್ಹರಾಗಿರುವಂಥಾ ರೋಜೀನಾ ಭತ್ಯವನ್ನೂ ಪಡೆಯತಕ್ಕದ್ದು.

1584ನೇ ಸರ್‌ಕ್ಯುಲರು "1596ನೇ ನಂಬರ್ ಸರ್‌ಕ್ಯುಲರ್‌ನಿಂದ ರದ್ದುಮಾಡಲ್ಪಟ್ಟಿರುತ್ತೆಂದು" ಗುರ್ತುಮಾಡಲ್ಪಡತಕ್ಕದ್ದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 23ನೇ ಸೆಪ್ಟಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ ಜೇವಾರಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನ ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ವಾಪಸ್ ತೆಗದುಕೊಳ್ಳದೇ ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ಅವುಗಳನ್ನ ನಾಶಪಡಿಸಲ್ಪಡುವವು.

ಯಡತೊರೆ ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಸೂಪರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
2 1882—83	ಯಡತೊರೆ ತಾಲ್ಲೂಕು ಗಳಿಗೆಕೆರೆ ಗ್ರಾಮದಲ್ಲಿ ವಾಸವಾಗಿರುವ ಸ್ಮಾರ್ತ ಬ್ರಾಹ್ಮಣ ತಮ್ಮಯ್ಯನವರ ಮಗ ಹಾಲೀ ಗಂದನಹಳ್ಳಿ ಫಿರಖಾ ಶಾನುಭೋಗ ಕೆಲಸ ನೋಡುವ ನಂಜುಂಡಯ್ಯ	ಯಡತೊರೆ ತಾಲ್ಲೂಕು ಪುರದ ಹೋಬಳಿ ಹಂಪಾಪುರದ ಗ್ರಾಮದಲ್ಲಿರುವ ವೈಷ್ಣವ ಬ್ರಾಹ್ಮಣ ನೆಂಕಟೇಷಯ್ಯನವರ ಮಗ ರಾಮಂಣ	14—6—82	14—7—82	ಶಾನುಭೋಗತನದ ಕೆಲಸ ನೋಡುವಂತೆ ಹುಕುಂ ಆಗಿರುವದರಿಂದ ಶಾನಾಯದ ಹುಟ್ಟುವಳಿ ಬೈಕೀ 18 ರೂಪಾಯಿಗಳನ್ನ ಸಾಲಿಯಾನಾ 10 ವರುಷದ ವರಿಗೂ ಪಾವತೀ ಮಾಡುವದಾಗಿ ಕರಾರು.
ತಿರಸ್ಕರಿಸಿದ್ದು 1882	ಮೈಸೂರು ಕಿಲ್ಲೇಯಲ್ಲಿ ವಾಸವಾಗಿ ಇರುವ ಸ್ಮಾರ್ತ ಬ್ರಾಹ್ಮಣ ಅಂಬಳಿ ಸುಬ್ರಹ್ಮಣ್ಯ ಪಂಡಿತರ ಮಗ ಅಂಬಳಿ ಅಣಿಯಯ್ಯ ಪಂಡಿತರು	ಮೈಸೂರು ಕಿಲ್ಲೇಯಲ್ಲಿರುವ ರುಕ್ವಿತ ಪುಟ್ಟಣ್ಣಶಾಸ್ತ್ರಿಗಳ ಮಕ್ಕಳು ವೈದೀಕವ್ರತ್ತಿಯಿಂದ ಜೀವಿಸುವ ಕೃಷ್ಣ ಶಾಸ್ತ್ರಿಗಳು	8—10—81		1,200 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.